OS No. 118/2021
PW-1- ನಾನ್ಕಿಬಾಯಿ
Date: 24.07.2025

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿ ಪರ ಶ್ರೀಮತಿ ಬಿ ಟಿ ಎಸ್ ವಕೀಲರಿಂದಃ**

ನಾನು ಸ.ನಂ.298 ಜಮೀನಿಗೆ ಸಂಬಂದಿಸಿದಂತೆ ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತು ಒಟ್ಟು 9 ಎಕರೆ ಜಮೀನು ಇದೆ. ನಾನು 3 ಎಕರೆಗೆ ಸಂಬಂದಿಸಿದಂತೆ ಈ ದಾವೆಯನ್ನು ಹೂಡಿದ್ದೇನೆ. ದಾವಾ ಸ್ವತ್ತು ಮೂಲತಃ ನನ್ನ ತಾತ ಗುಂಡಾನಾಯ್ಕ ರವರಿಗೆ ಸೇರಿತ್ತು. ನನ್ನ ತಾತನಿಗೆ 4 ಜನ ಮಕ್ಕಳು. ಅವರ ಹೆಸರು ಕಸಿನಾನಾಯ್ಕ, ತಾವರ ನಾಯ್ಕ, ಚಿಂಗ್ಯಾನಾಯ್ಕ ಮತ್ತು ಚಂದ್ರನಾಯ್ಕ. ಅವರಿಗೆ ಜಮೀನು ಹೇಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಆದರೆ ಅದು ಸೀಂದಿ ಖರಾಬು ಜಮೀನು ಆಗಿದೆ ಎಂದು ನನ್ನ ತಾತ ಹೇಳುತ್ತಿದ್ದರು. ಗುಂಡ್ಯಾ ನಾಯ್ಕ ರವರ ಹೆಸರಿನಲ್ಲಿ ಜಮೀನು ಇದ್ದ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಗುಂಡ್ಯಾನಾಯ್ಕ ರವರ ಮಕ್ಕಳು ಸದರಿ ಜಮೀನನ್ನು ವಿಭಜನೆ ಮಾಡಿಕೊಂಡಿದ್ದರು. ಅವರು ಯಾವ ದಿನಾಂಕದಂದು ವಿಭಜನೆಯನ್ನು ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಹುಟ್ಟಿದಾನಿಂದಲೂ ಅವರು ಪ್ರತ್ಯೇಕವಾಗಿ ಭಾಗ ಮಾಡಿಕೊಂಡಿದ್ದರು. ಸದರಿ ವಿಭಜನೆಯಲ್ಲಿ ಕಸೀನ ನಾಯ್ಕ ಮತ್ತು ತಾವರನಾಯ್ಕ ರವರಿಗೆ ತಲಾ ನಾಲ್ಕುವರೆ ಎಕರೆ ಬಂದಿತ್ತು. ಚಿಂಗ್ಯಾನಾಯ್ಕ ಮತ್ತು ಚಂದ್ರನಾಯ್ಕ ರವರಿಗೆ ಬೇರೆ ಆಸ್ತಿಯಲ್ಲಿ ಭಾಗವನ್ನು ನೀಡಲಾಗಿತ್ತು. ಸಾಕ್ಷಿ ಮುಂದುವರೆದು ನನ್ನ ತಾಯಿ ನನ್ನ ದೊಡ್ಡಪ್ಪ ಕಸೀನಾ ನಾಯ್ಕನಿಗೆ ನನ್ನ ತಂದೆಗೆ ಬಂದ ಜಮೀನಿನಲ್ಲಿ ಒಂದುವರೆ ಎಕರೆ ಜಮೀನನ್ನು ನೀಡಿದರು. ಸಾಕ್ಷಿ ಮುಂದುವರೆದು ನಾನು ಈಗ ಉಳಿದ 3 ಎಕರೆಗೆ ಸಂಬಂದಿಸಿದಂತೆ ಈ ದಾವೆಯನ್ನು ಹೂಡಿದ್ದೇನೆ ಎಂದು ನುಡಿದಿರುತ್ತಾರೆ. ಗುಂಡ್ಯಾನಾಯ್ಕ ರವರಿಗೆ ಒಟ್ಟು 20 ಎಕರೆ ಜಮೀನು ಇತ್ತು. ಗುಂಡ್ಯಾನಾಯ್ಕ ರವರಿಗೆ 20 ಎಕರೆ ಜಮೀನು ಇತ್ತು ಮತ್ತು ನನ್ನ ತಂದೆ ಉಳಿದ ಸಹೋದರರಿಗೆ ಬೇರೆ ಕಡೆ ಜಮೀನು ನೀಡಲಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುಂಡ್ಯಾನಾಯ್ಕ ನನ್ನ ತಾತ ಮತ್ತು ಅವರಿಗೆ 4 ಜನ ಮಕ್ಕಳು ಇದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತನ ಹೆಸರು ಕಸೀನಾ ನಾಯ್ಕ ಎಂದರೆ ಸರಿಯಲ್ಲ.

ಕಸೀನಾ ನಾಯ್ಕು ರವರಿಗೆ ತಾವರ ನಾಯ್ಕು, ಚಿಂಗ್ಯಾನಾಯ್ಕು ಮತ್ತು ಚಂದ್ರನಾಯ್ಕು ಮೂರು ಜನ ಗಂಡು ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಮೂವರು ಕಸೀನಾ ನಾಯ್ಕು ರವರ ಸಹೋದರರು ಎಂದು ನುಡಿದಿರುತ್ತಾರೆ.

ಕಸೀನಾ ನಾಯ್ಕು ರವರ ಹೆಂಡತಿ ಹೆಸರು ಹೇಮ್ಲಿಬಾಯಿ. ಚಿಂಗ್ಯಾನಾಯ್ಕು ರವರ ಹೆಂಡತಿ ಹೆಸರು ಲಚ್ಚಿ ಬಾಯಿ. ಚಿಂಗ್ಯಾ ನಾಯ್ಕು ರವರಿಗೆ ಮಕ್ಕಳು ಇರುವುದಿಲ್ಲ. ಚಂದ್ರನಾಯ್ಕು ರವರ ಹೆಂಡತಿ ಹೆಸರು ದೇವ್ಲಿಬಾಯಿ. ಅವರಿಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ತಾಯಿ ನನ್ನ ದೊಡ್ಡಪ್ಪನಿಗೆ ಒಂದುವರೆ ಎಕರೆ ಜಮೀನನ್ನು ನೀಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದುವರೆ ಎಕರೆ ಜಮೀನನ್ನು ನೀಡಿದ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನಗೆ 20 ವರುಷವಾದಾಗ ನನ್ನ ತಂದೆ ಮರಣ ಹೊಂದಿದ್ದರು. ನನ್ನ ತಂದೆ ಮತ್ತು ಆತನ ಸಹೋದರರು ಈವರೆಗೂ ವಿಭಜನೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಚಿಂಗ್ಯಾನಾಯ್ಕು ಮತ್ತು ಚಂದ್ರನಾಯ್ಕು ರವರ ಮಕ್ಕಳು ಕೂಡ ಈ ದಾವೆಗೆ ಅವಶ್ಯಕ ಪಕ್ಷಗಾರರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ರಾಷ್ಟ್ರೀಯ ಹೆದ್ದಾರಿಯ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಎಷ್ಟು ವಿಸ್ತೀರ್ಣ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಪರಿಹಾರದ ಹಣ ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ. 3 ಎಕರೆ ಜಮೀನಿನಲ್ಲಿ ಮಧ್ಯ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಗೊಂಡಿರುತ್ತದೆ. ಅಲ್ಲಿ ರಸ್ತೆಯಾದ ಕಾರಣ 3 ಎಕರೆ ಜಮೀನು ಆಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ.

ನನ್ನ ತಂದೆ ಸಾಕಷ್ಟು ಸಾಲವನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಅಕ್ಕ ಪುಟ್ಟಿಬಾಯಿ ಅವರು ಕೆರೆಯಾಗಳ ಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಅವರು ಮದುವೆಯಾಗಿ ಸುಮಾರು 50 ವರುಷವಾಗಿರುಬಹುದು ಆದರೆ ನನಗೆ ಗೊತ್ತಿಲ್ಲ. ಮದುವೆಯಾದ ಸಮಯದಿಂದಲೂ ಕೂಡ ಅವರು ಸದರಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನನ್ನ ಮದುವೆಯಾಗಿ ಸುಮಾರು 45 ವರುಷವಾಗಿರಬಹುದು. ನಾನು ಮದುವೆಯಾದ ಸಮಯದಿಂದಲೂ ಕುರುಹಳ್ಳಿಯಲ್ಲಿಯೇ ವಾಸವಾಗಿದ್ದೇನೆ ಎಂದರೆ ಸರಿ.ಲಕ್ಷ್ಮಿಬಾಯಿ ರವರು ನನ್ನ ತಾಯಿ ಗೌರಿ ಬಾಯಿ ರವರೊಂದಿಗೆ ವಾಸವಾಗಿ ಅವರ ಯೋಗ

ಕ್ಷೇಮವನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿ ನಾವು ಕೂಡ ನೋಡಿಕೊಳ್ಳುತ್ತಿದ್ದೇವೆ ಎಂದು ನುಡಿದಿರುತ್ತಾರೆ.



ನನ್ನ ತಾಯಿಯ ಸೇವೆಯನ್ನು 2 ನೇ ಪ್ರತಿವಾದಿ ಮಾತ್ರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ವಿದ್ಯಾಭ್ಯಾಸದ ವೆಚ್ಚವನ್ನು 2 ನೇ ಪ್ರತಿವಾದಿಯೇ ನೋಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2010 ರಲ್ಲಿ ನನ್ನ ತಾಯಿಯ ಸೊಂಟ ಮುರಿದಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಯ ಮಕ್ಕಳೇ ನನ್ನ ತಾಯಿಗೆ ದಬ್ಬಿ ಸೊಂಟ ಮುರಿದಿದ್ದರು ಎಂದು ನುಡಿದಿರುತ್ತಾರೆ. 2 ನೇ ಪ್ರತಿವಾದಿಯ ಮಕ್ಕಳೇ ನನ್ನ ತಾಯಿಯನ್ನು ದಬ್ಬಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನನ್ನ ತಾಯಿಯ ಚಿಕಿತ್ಸೆ ವೆಚ್ಚವನ್ನು 2 ನೇ ಪ್ರತಿವಾದಿಯೇ ಭರಿಸಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಸ್ವತ್ತನ್ನು ಅಭಿವೃದ್ಧಿ ಮಾಡಲು ಬ್ಯಾಂಕ್ ನಿಂದ ಸಾಲ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 2 ನೇ ಪ್ರತಿವಾದಿ ಒಂದು ಜೊತೆ ಎತ್ತನ್ನು ಕೊಡಿಸಿದ್ದರು ಎಂದರೆ ಸರಿಯಲ್ಲ. ವಿಭಜನೆ ಸಮಯದಲ್ಲಿ ದಾವಾ ಸ್ವತ್ತು ನನ್ನ ತಂದೆಯ ಭಾಗಕ್ಕೆ ಬಂದಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ